# ನದಿ ಜೋಡಣೆ ...

ಕೆರೆ ಸಮ್ಮೇಳನಕ್ಕೆ ಚಾಲನೆ ನೀಡಿದರು. ಸಂಯೋಜಕ ಅನಂತ ಆಶೀಸರ ಮಾತನಾಡಿ, 'ರಾಜ್ಯದ 25,000 ಸಣ್ಣ ಕೆರೆಗಳು ಸಂರಕ್ಷಣೆ ಆಗಬೇಕಿದೆ. ಕರಾವಳಿ ಅಳಿವೆಗಳ ಸಮಸ್ಯೆ ಪರಿಹರಿಸಲು ಹಸಿರು ಕವಚ ಯೋಜನೆ ಅನುಷ್ಠಾನ ಆಗಬೇಕು' ಎಂದರು.

ಪರಿಸರ ಚಿಂತಕ ಬಿ ಎಂ ಕುಮಾರಸ್ವಾಮಿ, ನದಿ ಜೋಡಣೆ ಅಪಾಯ ತಿಳಿಸಿ, ಕೈ ಬಿಡಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ವಿಶ್ವೇಶ್ವರ ಹೆಗಡೆ, ಅಡಕೆ ಬೆಳೆಗಾರರ ಹಿತರಕ್ಷಣೆ ಹಾಗೂ ಅರಣ್ಯ ಅತಿಕ್ರಮಣದಾರರ ಹಿತರಕ್ಷಣೆಗೆ ಕೇಂದ್ರದ ಮೇಲೆ ಒತ್ತಡ ಹಾಕಲಿದ್ದೇವೆ ಎಂದರು.

ವಾಗ್ದೇವಿ ಶಿಕ್ಷಣ ಸಂಸ್ಥೆ ಪ್ರಮುಖ ಹರೀಶ್, ಭಾರತೀಯ ವಿಜ್ಞಾನ ಸಂಸ್ಥೆ ಪ್ರಮುಖ ಟಿ ವಿ ರಾಮಚಂದ್ರ,ಸುಭಾಸಚಂದ್ರನ್ ಮಾತನಾಡಿದರು.

ಚೆನ್ನೈಯ ಸಿಪೀಟ್ ಸಂಸ್ಥೆ ಪ್ರಮುಖ ಆರ್ ಎಸ್ ನಾಯ್ಕ, ಸಂಚಾಲಕ ವಿ ಎನ್ ಹೆಗಡೆ ಸ್ವಾಗತಿಸಿದರು. ಸಂಮಾನ ಪತ್ರವನ್ನು ಬಿ ಎಚ್ ರಾಘವೇಂದ್ರ ವಾಚಿಸಿದರು. ಅನಂತ ಭಟ್ ಕಾರ್ಯಕ್ರಮ ನಿರ್ವಹಿಸಿದರು. ಎಂ ಸಿ ಹೆಗಡೆ ವಂದಿಸಿದರು. ಬಳಿಕ ಜಿ ಎಂ ಭಟ್ಟ ವಾಜಗಾರ ತಂಡದಿಂದ ಯಕ್ಷಗಾನ ಸ್ವಾಗತ ಪದ್ಯ ಪ್ರಸ್ತುತಗೊಂಡಿತು.

ಕನ್ನಡ ಜನಾಂತರಂಗ, 14-11-2014, Page no: 4